**ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಯಾದಗಿರಿ.**

**ಎಸ್.ಸಿ. 19/2022**

1. ಗುರುಮಠಕಲ್ ಪೊಲೀಸಠಾಣೆ .....ಫಿರ್ಯಾದಿ

ವಿರುದ್ಧ

1. ನರಸಪ್ಪ ಮತ್ತು ಇತರರು .....ಆರೋಪಿತರು

<u>ದೋಷಾರೋಪಣೆ</u>

ನಾನು **ಎ. ಈರಣ್ಣ ಎಮ್.ಕಾಂ. ಎಲ್.ಎಲ್.ಎಮ್** ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ,

ಆರೋಪಿತರಾದಃ

1. ನರಸಪ್ಪ ತಂದೆ ಸಂಗಪ್ಪ ನಾಯ್ಕೋಡಿ, ವಯಸ್ಸುಃ 43 ವರ್ಷ, ಉದ್ಯೋಗಃ ಗಾರೆಕೆಲಸ ಸಾಃ ಗಾಜರಕೋಟ್, ತಾಃಗುರುಮಠಕಲ್ ಜಿಃ ಯಾದಗಿರಿ
2. ಮಾಶೆಪ್ಪ ತಂದೆ ಸಂಗಪ್ಪ ನಾಯ್ಕೋಡಿ, ವಯಸ್ಸುಃ 56 ವರ್ಷ, ಉದ್ಯೋಗಃ ಗಾರೆಕೆಲಸ ಸಾಃ ಗಾಜರಕೋಟ್, ತಾಃಗುರುಮಠಕಲ್ ಜಿಃ ಯಾದಗಿರಿ
3. ಅನಂತಮ್ಮ ಗಂಡ ನರಸಪ್ಪ ನಾಯ್ಕೋಡಿ, ವಯಸ್ಸುಃ 30 ವರ್ಷ, ಉದ್ಯೋಗಃ ಮನೆಕೆಲಸ ಸಾಃ ಗಾಜರಕೋಟ್, ತಾಃಗುರುಮಠಕಲ್ ಜಿಃ ಯಾದಗಿರಿ
4. ದೇವಪ್ಪ ತಂದೆ ಮಾಶೆಪ್ಪ ನಾಯ್ಕೋಡಿ, ವಯಸ್ಸುಃ 20 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಗಾಜರಕೋಟ್, ತಾಃಗುರುಮಠಕಲ್ ಜಿಃ ಯಾದಗಿರಿ

5 ದೇವಿಂದ್ರಪ್ಪ ತಂದೆ ದ್ಯಾವಪ್ಪ ನಾಯ್ಕೋಡಿ, ವಯಸ್ಸುಃ 28 ವರ್ಷ, ಉದ್ಯೋಗಃ ಒಕ್ಕಲುತನ ಸಾಃ ಗಾಜರಕೋಟ್, ತಾಃಗುರುಮಠಕಲ್ ಜಿಃ ಯಾದಗಿರಿ

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ಗುರುಮಠಕಲ್ ಪೊಲೀಸ ಠಾಣಾ ಹದ್ದಿಯ ಪೈಕಿ ಗಾಜರಕೋಟ್ ಗ್ರಾಮದಲ್ಲಿ ದಿಃ 21.12.2021 ರಂದು ಸಂಜೆ 7.00 ಗಂಟೆ ಸುಮಾರು ಆರೋಪಿತರಾದ ನೀವೆಲ್ಲರೂ ಕೈಯಲ್ಲಿ ಕಲ್ಲು, ತಲವಾರ ಹಿಡಿದುಕೊಂಡು ಕೊಲೆ ಮಾಡುವ ಉದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಸದರಿ ಸ್ಥಳದಲ್ಲಿ ಸೇರಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವುಗಳು ಚಾಸಾ-1 ಮತ್ತು 5 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.147 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವುಗಳು ಚಾಸಾ-1 ಮತ್ತು 5 ರವರಿಗೆ ಕಲ್ಲು ಮತ್ತು ತಲವಾರ ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.148 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವೆಲ್ಲರೂ ಚಾಸಾ-1 ಮತ್ತು 5 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಲೇ ಸುಳೆ ಮಕ್ಕಳೇ ನಮಗೆ ಇರುವ ಬನ್ನಿ ಮುಡಿಯುವ ಜಾಗವನ್ನು ನೀವು ಹೇಗೆ ತೆಗೆದುಕೊಂಡಿರಿ ರಂಡಿ ಮಕ್ಕಳ್ಯಾ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವುಗಳು ಆರೋಪಿತರಾದ ನೀವು ಚಾಸಾ-1 ರವರಿಗೆ ನಿಮಗೆ ಒಂದು ಗತಿ ಕಾಣಿಸುತ್ತೇವೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

6. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 4 ನೇ ಆರೋಪಿ ತನ್ನ ಕೈಯಲ್ಲಿ ಇದ್ದಂತಹ ಕಲ್ಲಿನಿಂದ ಚಾಸಾ-2 ರವರ ಹಣೆಗೆ ಹೊಡೆದು, ಕಲ್ಲಿನಿಂದ ಎಡಮೊಣಕಾಲಿಗೆ ಹೊಡೆದು ಗುಪ್ತಗಾಯ ಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.323 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

7. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 2 ನೇ ಆರೋಪಿ ಚಾಸಾ-5 ರವರಿಗೆ ಹಣೆಯ ಎಡಗಡೆ ಕಲ್ಲಿನಿಂದ ಹೊಡೆದು ರಕ್ತಗಾಯ ಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

8. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 5 ನೇ ಆರೋಪಿ ಚಾಸಾ-5 ರವರಿಗೆ ಎದೆಗೆ ಗುದ್ದಿದ್ದು, ಆರೋಪಿ 1 ರಿಂದ 5 ರವರು ಚಾಸಾ-1 ರವರನ್ನು ನಡುವೆ ಮಾಡಿಕೊಂಡು ಕೈಗಳಿಂದ ಹೊಡೆಬಡೆ ಮಾಡುತ್ತಿರುವಾಗ ಚಾಸಾ-1 ರವರು ಮಧ್ಯೆ ಹೋದಾಗ 1 ನೇ ಆರೋಪಿ ಚಾಸಾ-1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ತಲವಾರದಿಂದ ಚಾಸಾ-1 ರವರ ಕುತ್ತಿಗೆಗೆ ಹೊಡೆಯಲು ಹೋದಾಗ ಚಾಸಾ-1 ರವರು ತಪ್ಪಿಸಿಕೊಂಡಿದ್ದು, ಆರೋಪಿ 2 ರಿಂದ 5 ರವರು ಚಾಸಾ-1 ರವರ ಎಡಭುಜ, ತಲೆಗೆ, ಎದೆಗೆ ಹೊಡೆದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.307 ಸಹವಾಚಕ 149 ರಡಿಯಲ್ಲಿ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ **23.10.2025** ರಂದು ಆದೇಶಿಸಿದ್ದೇನೆ.

ಸ್ಥಳಃ- ಯಾದಗಿರಿ

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.